# ವಾರ್ಡ್ ಸಭೆ ಸಂಖ್ಯೆ.10

ದಿನಾಂಕ: 06.03.2021 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

## ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ **(ಅಧ್ಯಕ್ಷರು)**
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
3. ಶ್ರೀ ಜಯಪಾಲ್ ಸದಸ್ಯರು.
4. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
5. ಶ್ರೀಮತಿ ಪ್ರೇಮ ಸದಸ್ಯರು.
6. ಕುಮಾರಿ ಕಮಲ ಡಿ ಸದಸ್ಯರು.
7. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
8. ಶ್ರೀ ರಾಜೇಶ್ ಸದಸ್ಯರು.
9. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
10. ಶ್ರೀ ನಾಗೇಂದ್ರ ಸದಸ್ಯರು.
11. ಶ್ರೀ ಗೋಪಿ ಸದಸ್ಯರು.
12. ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
14. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
16. ಶ್ರೀ ದಿನೇಶ್ ಕುಮಾರ್ಸಹಾಯಕ ಅಭಿಯಂತರರು, ಬೆಸ್ಕಾಂ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
17. ಶ್ರೀ ಲೋಕೇಶ್ ಪಶುಸಂಗೋಪನ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
18. ಶ್ರೀ ಆರ್.ಎಂ.ಸಿ ಯಾರ್ಡ್ ಲೇಔಟ್ ಪೋಲೀಸ್ ಅಧಿಕಾರಿ, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
19. ಶ್ರೀ ನಂದಿನಿ ಲೇಔಟ್ ಪೋಲೀಸ್ ಅಧಿಕಾರಿ, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
20. ಶ್ರೀ ದೇವಣ್ಣ ಮಾರ್ಷಲ್ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು.
2. ಕಾರ್ಯದರ್ಶಿಗಳು ಬೆಸ್ಕಾಂ ಅಧಿಕಾರಿಗಳಿಗೆ ರಸ್ತೆ ಅಗೆತ ಗುಂಡಿಗಳನ್ನು ಮುಚ್ಚಲು ಸೂಚಿಸಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ಮುಚ್ಚಲಾಗುವುದು ಎಂದು ತಿಳಿಸಿದರು.
3. ಬೆಸ್ಕಾಂ ಅಧಿಕಾರಿಗಳು ವಾರ್ಡ್‌ನ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲಾಗುವುದು ಆದ್ದರಿಂದ ಬೀದಿ ದೀಪಗಳಿಗೆ ವ್ಯವಸ್ಥೆ ಮಾಡಿಕೊಳ್ಳಿ ಎಂದು ತಿಳಿಸಿದರು.

Scanned with CamScanner

4. ಶ್ರೀಮತಿ ಪ್ರೇಮ ಸದಸ್ಯರು ರವರು ಇಂದಿರ ಪ್ರಿಯದರ್ಶಿನಿ ಪಾರ್ಕ್ ಆಟೋಸ್ಟ್ಯಾಂಡ್ ಹತ್ತಿರ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಸದರಿ ದೀಪಗಳಿಗೆ ಸ್ವಿಚ್ ಅಳವಡಿಸಲಾಗಿರುತ್ತದೆ ಅದನ್ನು ಆನ್ ಮಾಡಿರುವುದಿಲ್ಲ ಎಂದು ತಿಳಿಸಿದರು.
5. ಸದಸ್ಯರು ಶಂಕರನಗರ, 1ನೇ ಮುಖ್ಯರಸ್ತೆ ಹತ್ತಿರ ರಸ್ತೆ ಅಗೆತದಿಂದ ಸ್ಯಾನಿಟರಿ ಬ್ಲಾಕ್ ಆಗಿದೆ ಎಂದು ತಿಳಿಸಿದರು ಇದಕ್ಕೆ ಕಾರ್ಯದರ್ಶಿಗಳು ಜಿಯೋ ಕೇಬಲ್ ಅಳವಡಿಸಲು ರಸ್ತೆ ಅಗೆತವನ್ನು ಮಾಡುತ್ತಿರುತ್ತಾರೆ ಇದರಿಂದ ತೊಂದರೆಯಾಗಿರುತ್ತದೆ ಆದ್ದರಿಂದ ಸಮಸ್ಯೆಯನ್ನು ಪರಿಹರಿಲು ಸಂಬಂದಪಟ್ಟವರಿಗೆ ತಿಳಿಸಲಾಗುವುದು ಎಂದು ಹೇಳಿದರು.
6. ಕಾರ್ಯದರ್ಶಿಗಳು ಶಂಕರನಗರದಲ್ಲಿ ಸ್ಯಾನಿಟರಿ ಬ್ಲಾಕ್, ರಕ್ಷಾ ಆಸ್ಪತ್ರೆಯ ಹತ್ತಿರ ಮ್ಯಾನ್‌ಹೋಲ್ ಸಿಂಕ್ ಆಗುವುದನ್ನು ಸರಿಪಡಿಸಿ ಮಸೀದಿ ರಸ್ತೆ ಮತ್ತು ಗೌತಮನಗರದ ಪೈಪ್‌ಲೈನ್ ಅಳವಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿರಿಗಳಿಗೆ ತಿಳಿಸಿದರು.
7. ಮಾನ್ಯ ಅದ್ಯಕ್ಷರು ಶಂಕರನಗರದಲ್ಲಿ ಕಸ ವಿಂಗಡಣೆ ಸಮರ್ಪಕವಾಗಿ ಆಗುತ್ತಿರುತ್ತದೆ ಎಂದು ತಿಳಿಸಿದರು.
8. ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋವಿದ್-19 ಗೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸುವಂತೆ ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿಡ್-19 ಗೆ ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ಓದಿ ತಿಳಿಸಿದರು.
9. ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋವಿದ್-19 ವ್ಯಾಕ್ಸಿನೇಷನ್‌ನನ್ನು 60 ವರ್ಷ ಮೇಲ್ಪಟ್ಟವರಿಗೆ ನೀಡಲಾಗುತ್ತಿದೆಯೆ ಎಂದು ಮಾಹಿತಿಯನ್ನು ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ನೀಡಲಾಗುತ್ತಿದೆ ಎಂದು ತಿಳಿಸಿದರು.
10. ಶ್ರೀ ರಾಜೇಶ್ ಸದಸ್ಯರು ರವರು ಪಾರ್ಕ್‌ಗಳಿಗೆ ಔಷದಿಯನ್ನು ಸಿಂಪಡಿಸಲು ಕೋರಿದರು. ಇದಕ್ಕೆ ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಔಷದಿಯನ್ನು ಸಿಂಪಡಿಸಲಾಗುವುದೆಂದು ತಿಳಿಸಿದರು.
11. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು

K. Lwayanmpralla

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44

ಮಾರಪ್ಪನಪಾಳ್ಯ

Scanned with CamScanner